

ಫ್ಯಾಷನ್

# ಹೊಳೆಹೊಳೆವ ಗಾಜಿನೋಲೆ

**ಗಾಜಿನ ಬಳೆ ಅನಾದಿ ಕಾಲದಿಂದಲೂ ಇದೆ. ಇದೀಗ ಗಾಜಿನ ಓಲೆಗಳು ಫ್ಯಾಷನ್ ಜಗತ್ತಿಗೆ ಎಂಟ್ರಿ ಕೊಟ್ಟಿದ್ದು ಹೊಸ ಟ್ರೆಂಡ್ ಸೃಷ್ಟಿಸಿದೆ.**

■ ಸುಮಾವೀಣಾ

ಗಾಜಿನ ಬಳೆ ಎಲ್ಲ ಮಹಿಳೆಯರಿಗೆ ಪ್ರಿಯವಾದದ್ದು. ಸಂಪ್ರದಾಯಕ್ಕೂ ಫ್ಯಾಷನ್‌ಗೂ ಸೈ ಎನಿಸುತ್ತದೆ ಗಾಜಿನ ಬಳೆ. ಇದರಲ್ಲಿ ಆಕರ್ಷಕ ಬಣ್ಣ, ವಿನ್ಯಾಸ, ಕುಚ್ಚು, ಚಿಮ್ಕಿಗಳಿದ್ದ ಗಾಜಿನ ಬಳೆಗಳು ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಅನುಕೂಲ. ಇದೀಗ ಫ್ಯಾಷನ್ ಜಗತ್ತಿಗೆ ಗಾಜಿನ ಕಿವಿಯೋಲೆ ಬಂದಿದ್ದು ಹೊಸ ಟ್ರೆಂಡ್ ಸೃಷ್ಟಿಸಿದೆ.

ಗಾಜು ಅವಶ್ಯಕತೆಯೂ ಹೌದು, ಅಲಂಕಾರವೂ ಹೌದು. ಅದು ಮನೆಯನ್ನು ದಾಟಿ ಹೆಂಗಳೆಯರ ಕಿವಿಯೇರಿರುವುದು ಒಂಥರಾ ಸೋಜಿಗ. ಕಿಟಕಿ ಬಾಗಿಲು, ಬಲ್ಬುಗಳು, ಅಲಂಕಾರಿಕ ಹೂಜಿಗಳಲ್ಲಿ, ಊಟ ತಿಂಡಿ ಕಾಫಿ ಜ್ಯೂಸ್ ಕುಡಿಯುವಲ್ಲಿ ವಿವಿಧ ವಿನ್ಯಾಸದ ಗಾಜಿನ ಬಟ್ಟಲು, ಗ್ಲಾಸುಗಳು ಸಾಮಾನ್ಯ. ಈಗ ಟ್ರೆಂಡಿ ಕಿವಿಯೋಲೆಗಳು ಆಕರ್ಷಕ ವಿನ್ಯಾಸಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿದೆ.

ಸುಲಭಕ್ಕೆ ಹೊಳಪನ್ನು ಕಳೆದುಕೊಳ್ಳದ, ರಾಸಾಯನಿಕಗಳು ತಾಗಿದಾಗಲೂ ಬಣ್ಣ ಮಾಸದ, ಬೇಗನೆ ಒಡೆಯದ ಉತ್ತಮ ಗುಣಮಟ್ಟದ ಗಾಜಿನಿಂದ ಮಾಡಿದ ಕಿವಿಯೋಲೆಗಳು ಹುಡುಗಿಯರ ಮೆಚ್ಚಿನ ಒಡವೆ. ಇದರಲ್ಲಿ ಒಂದೇ ಬಣ್ಣ, ಇಲ್ಲವೇ ಎರಡು ಹಾಗೂ ಬಹು ವರ್ಣಗಳಲ್ಲೂ ಕಿವಿಯೋಲೆಗಳು ವಿನ್ಯಾಸಗೊಂಡಿದ್ದು ಉಡುಪುಗಳ ಜೊತೆ ಮ್ಯಾಚಿಂಗ್ ಮಾಡಿಕೊಳ್ಳಲು ಅನುಕೂಲವಾಗಿದೆ.

ಹೆಣ್ಣು ಮಕ್ಕಳು ಕಾಲಕ್ಕೆ ತಕ್ಕಂತೆ ಸಹಜವಾಗಿ ಕ್ಲಾಸಿಕ್ ಆಗಿ ಕಾಣಲು ಬಯಸುತ್ತಾರೆ. ಗಾಜಿನ ಕಿವಿಯೋಲೆಗಳು ಅವಳ ಅಭಿರುಚಿಗೆ ತಕ್ಕಂತೆ ಬಿಂದುವಿನಾಕಾರದಿಂದ ಗಲ್ಲದವರೆಗೂ ತೂಗುವ ಅಗಣಿತ ವಿನ್ಯಾಸಗಳಲ್ಲಿ ಲಭ್ಯವಿದೆ. ಸಮಾರಂಭಕ್ಕೆ ತಕ್ಕಂತೆ, ಉಡುಪಿಗೆ ತಕ್ಕಂತೆ ಸಾಂಪ್ರದಾಯಿಕ ಹಾಗೂ ಪಾಶ್ಚಾತ್ಯ ಶೈಲಿಯ ಉಡುಗೆಗಳಿಗೂ ಇವು ಹೊಂದಿಕೆಯಾಗಿ ವಿಶೇಷ ಮೆರುಗು ತರುತ್ತವೆ.

ಲೋಲಾಕಿನಂತೆ ತೂಗುವ ವಿನ್ಯಾಸದ ಈ ಆಭರಣಗಳು ವಿಶೇಷ ಅನುಭೂತಿಯನ್ನು ನೀಡುತ್ತವೆ. ಹಳೆಯ ವಿನ್ಯಾಸ ಹಾಗೂ ಹೊಸದೆರಡನ್ನು ಸರಿದೂಗಿಸಿಕೊಂಡು ಹೋಗುತ್ತದೆ. ತಯಾರಕರ ಕೈ ಚಳಕವನ್ನು ಇಲ್ಲಿ ಗಮನಿಸಬಹುದು. ಕೆಲವರಿಗೆ ಏನೇ ಅಲಂಕಾರ ಮಾಡಿಕೊಂಡರೂ ಮ್ಯಾಚಿಂಗ್ ಧರಿಸಬೇಕೆಂದಿರುತ್ತದೆ. ಅಂಥವರ ಉಡುಪಿಗೆ ಮಿಕ್ಸ್ ಮ್ಯಾಚಿಂಗ್ ಮಾಡಿಕೊಳ್ಳಲು ಇವು ಸರಿಯಾದ ಆಯ್ಕೆ.

ಉಡುಪಿಗೆ ಶೋಭೆಯನ್ನು ತರುವ ಗಾಜಿನ ಆಭರಣಗಳನ್ನು ರಫ್ ಅಂಡ್ ಟಫ್ ಆಗಿ ಬಳಸಿದರೂ ಏನೂ ಯೋಚನೆಯಿಲ್ಲ. ಇದು ದುಬಾರಿಯೂ ಅಲ್ಲ. ಜೋಪಾನ ಮಾಡುವ, ಕಳೆದು ಹೋಗುವ ಭಯ ಇರುವುದಿಲ್ಲ. ಬಹು ಆಯ್ಕೆಗೆ ಅವಕಾಶವಿದೆ. ಗಾಜಿನ ಕಿವಿಯೋಲೆಗಳ ಇನ್ನೊಂದು ವಿಶೇಷವೆಂದರೆ ಇವುಗಳ ಅನನ್ಯ ಬಣ್ಣ ಮತ್ತು ವಿನ್ಯಾಸ. ಹೆಣ್ಣು ಮಕ್ಕಳಿಗೆ ಯಾವಾಗಲೂ ನಾವೇ ಸೂಪರ್ ಆಗಿ ಕಾಣಬೇಕು ಅನ್ನುವ ಆಸೆ ಇದ್ದೇ ಇರುತ್ತದೆ.

ಗಾಜಿನೋಲೆ ಧರಿಸಲು ಬಹಳ ಹಗುರವಾಗಿರುತ್ತದೆ. ಅನ್ಯ ಲೋಹಗಳ ಆಭರಣಗಳನ್ನು ಹಾಕಿದಾಗ ಚರ್ಮದ ಅಲರ್ಜಿಯಂಥ ಸಮಸ್ಯೆ ಬರಬಹುದು. ಆದರೆ ಗಾಜಿನ ಓಲೆಗಳಿಂದ ಈ ಸಮಸ್ಯೆ ಬಾರದು. ದೈನಂದಿನ ಬಳಕೆಗೆ ಉತ್ತಮ ಆಯ್ಕೆಯಾಗಿರುವ ಈ ಗಾಜಿನೋಲೆಗಳನ್ನು ವಿಶೇಷ ಸಂದರ್ಭಗಳಲ್ಲಿ ಉಡುಗೊರೆಯಾಗಿ ಕೊಡಬಹುದು. ಒಟ್ಟಾರೆಯಾಗಿ ಧರಿಸಲು ಹಗುರವಾಗಿ ಸೌಂದರ್ಯವನ್ನು ಇಮ್ಮಡಿಗೊಳಿಸುವ ಆಕರ್ಷಕ ಗಾಜಿನ ಕಿವಿಯೋಲೆಗಳು ಕೊಳ್ಳಲು ಬಲು ಭಾರವಲ್ಲ, ಅತ್ಯಾಕರ್ಷಕ ಗಾಜಿನೋಲೆಗಳು ಪ್ರೀತಿ ಪಾತ್ರರ ಓಲೈಕೆಗೂ ಸೂಕ್ತವೇ! ■

